**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ.**

**ಸಿ.ಸಿ ನಂಃ 1237/ 2016**

| | | |
|---|---|---|
| ಸಾಕ್ಷಿಯ ಹೆಸರಃ | ಡಾ. ಮಂಜುನಾಥ | ಫ್ರಾಸಾಃ6 |
| ತಂದೆಯ ಹೆಸರುಃ | ವೈ.ಕೆ.ಸಿದ್ದಯ್ಯ | ಚಾಸಾಃ 9 |
| ವಯಸ್ಸುಃ | 40 ವರ್ಷ | ದಿಃ 21-01-2025 |
| ಉದ್ಯೋಗಃ | ತಜ್ಞ ವೈದ್ಯರು, ಸರ್ಕಾರಿ ಆಸ್ಪತ್ರೆ ಸಾಲಿಗ್ರಾಮ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕೆ.ಆರ್.ನಗರ | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು 2015 ರಿಂದ ಇಲ್ಲಿಯವರೆಗೆ ಸಾಲಿಗ್ರಾಮದ ಸರ್ಕಾರಿ ಆಸ್ಪತ್ರೆಯಲ್ಲಿ ತಜ್ಞ ವೈದ್ಯನಾಗಿ ಕರ್ತವ್ಯ ನಿರ್ವಹಿಸುತ್ತೀದ್ದೇನೆ.

1. ದಿಃ19.04.2016 ರಂದು ನಾನು ಕರ್ತವ್ಯದಲ್ಲಿದ್ದಾಗ ಸಂಜೆ 6.45 ಗಂಟೆಗೆ ಚಾಸಾಃ1 ರವರು ತಮ್ಮ ನೆರ ಮನೆಯವರಿಂದ ಆದ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಚಾಸಾ 1 ರವರನ್ನು ಪರೀಕ್ಷೆಗೆ ಒಳಪಡಿಸಿದಾಗ ಚಾಸಾ 1 ರವರ ಮೇಲೆ ಈ ಕೆಳಗೆ ಹೇಳಿದಂತ ಗಾಯಗಳು ಕಂಡುಬಂದಿರುತ್ತವೆಃ

(ಎ) ಬಲಕೆನ್ನೆಯಲ್ಲಿ ತರಚಿದ ಗಾಯ

(ಬಿ) ಬಲಬದಿಯ ಕುತ್ತಿಗೆಯಲ್ಲಿ ತರಚಿದ ಗಾಯ

(ಸಿ) ಎಡಕೈನ ಮುಂಗೈ ಅಲ್ಲಿ ತರಚಿದ ಗಾಯ

(ಡಿ) ಎಡಗಾಲಿಗೆ ತರಚಿದ ಗಾಯ

(ಇ) ಎಡಗೈನ ಮಧ್ಯದ ಮತ್ತು ಪಕ್ಕದ ಬೆರಳುಗಳ ಮಧ್ಯೆ ತರಚಿದ ಗಾಯಗಳಾಗಿದ್ದು,

ನನ್ನ ಅಭಿಪ್ರಾಯದ ಪ್ರಕಾರ ಚಾಸಾ1 ರವರಿಗೆ ಆದ ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿರುತ್ತವೆ.

ಚಾಸಾ 1 ರವರನ್ನು ತಪಾಸಣೆ ಮಾಡಿದ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಮತ್ತು ಅದರಲ್ಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಗಾಯ ಪ್ರಮಾಣ ಪತ್ರವನ್ನು ನಿಪಿ.4 ಎಂದು ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ.ಜಿ. ವಕೀಲರಿಂದಃ**

1. ಮಚ್ಚಿನಿಂದ ಹೊಡೆದರೆ ತರಚಿದ ಗಾಯಗಳು ಆಗುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದಾದರೂ ವ್ಯಕ್ತಿಗೆ ಉದ್ದದ ಹಗ್ಗದಿಂದ ಹೊಡೆದರೆ ಅವನ ದೇಹದ ಹಲವು ಭಾಗಕ್ಕೆ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ 1 ರವರಿಗೆ ಹಲ್ಲೆ ಮಾಡಿದೆ ಎನ್ನಲಾಗಿರುವ ಯಾವುದೇ ಮುದ್ದೆ ಮಾಲನ್ನು ತನಿಖಾಧಿಕಾರಿಯವರು ನನ್ನ ಮುಂದೆ ಹಾಜರುಪಡಿಸಿರುವುದಿಲ್ಲ. ಚಾಸಾ 1 ರವರಿಗೆ ಆದ ಗಾಯದ ಉದ್ದಳತೆಯನ್ನು ನಾನು ನಿಪಿ.4 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ನಿಪಿ.1 ರಲ್ಲಿ ನಾನು ಗಾಯದ ಬಣ್ಣ ಬರೆದಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯು ಚಲಿಸುವ ವಾಹನದಿಂದ ಬಿದ್ದರೆ ನಿಪಿ.4 ರಲ್ಲಿ ಹೇಳಿದಂತೆ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ.

**ಮರುವಿಚಾರಣೆ ಃ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು., ಕೆ.ಆರ್.ನಗರ**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರ ನ್ಯಾಯಾಲಯ, ಕೆ.ಆರ್.ನಗರ .**

**ಸಿ.ಸಿ ನಂಃ 1237 / 2016**

| | | |
|---|---|---|
| ಸಾಕ್ಷಿಯ ಹೆಸರಃ | ಚಂದ್ರಶೇಖರ.ಹೆಚ್.ಆರ್ | ಫ್ರಾಸಾಃ 7 |
| ತಂದೆ ಹೆಸರುಃ | ಲೇಟ್ ಹೆಚ್.ಡಿ.ರಾಮಚಂದ್ರಯ್ಯ | ಚಾಸಾಃ 10 |
| ವಯಸ್ಸುಃ | 58 ವರ್ಷ | ದಿಃ 21-01-2025 |
| ಉದ್ಯೋಗಃ | ಪಿ.ಡಿ.ಒ., ಕಗ್ಗೆರೆ ಗ್ರಾಮ ಪಂಚಾಯಿತಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಹೆಬ್ಬಾಳು | |

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ಅಭಿಯೋಜಕರಿಂದಃ**

ನಾನು ದಿಃ 13.11.2013 ರಿಂದ 13.01.2018 ರವರೆಗೆ ಮಿರ್ಲೆ ಗ್ರಾಮ ಪಂಚಾಯಿತಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಅಂತ ಸೇವೆ ಸಲ್ಲಿಸಿರುತ್ತೇನೆ.

ಸಿದ್ದೇಗೌಡ ಬಿನ್ ಬೋರೇಗೌಡರ ಹೆಸರಿನಲ್ಲಿರುವ ಡಿಮಾಂಡ್ ರೆಜಿಸ್ಟರ್ ನ ಪ್ರತಿಯನ್ನು ನೀಡುವಂತೆ ಪೋಲಿಸರು ನನಗೆ ಅರ್ಜಿಯನ್ನು ನೀಡಿದ್ದು, ದಾಖಲೆಗಳನ್ನು ಪರಿಶೀಲಿಸಿದಾಗ ಸದರಿಯವರ ಹೆಸರಿನಲ್ಲಿ ಯಾವುದೇ ಮನೆ ಇರದಿರುವುದು ಕಂಡುಬಂದಿರುತ್ತದೆ. ಸದರಿ ಸಿದ್ದೇಗೌಡರ ತಂದೆಯಾದ ಬೋರೆಗೌಡರ ಹೆಸರಿನಲ್ಲಿ ಮನೆ ಇದ್ದು, ಅದರ ಬಗ್ಗೆ ನಾನು ಪೋಲಿಸರಿಗೆ ಡಿಮಾಂಡ್ ರೆಜಿಸ್ಟರಿನ ದೃಡಿಕೃತ ನಕಲನ್ನು ನೀಡಿರುತ್ತೇನೆ. ಸಾಕ್ಷಿಗೆ ಈಗ 2 ಅಸೆಸ್ ಮೆಂಟ್ ರೆಜಿಸ್ಟರ್ ಗಳ ದೃಡಿಕೃತ ನಕಲುಗಳನ್ನು ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಗಳನ್ನು ನೋಡಿ ಸದರಿ ದಾಖಲೆಯನ್ನು ತಾನೇ ನೀಡಿರುವುದಾಗಿ ಹಾಗೂ ಅದರಲ್ಲಿ ಇರುವ ಸಹಿಗಳು ತಮ್ಮದೇ ಎಂದು ನುಡಿದಿದ್ದು,

ಸದರಿ ದಾಖಲೆಗಳನ್ನು ನಿಪಿ.5 ಮತ್ತು 6 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.5 (ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಟಿ.ಜಿ ಆರೋಪಿ ಪರ ವಕೀಲರಿಂದಃ**

1. ಚಾಸಾ 1 ಮತ್ತು 2 ರವರ ಮನೆಯ ಡಿಮಾಂಡ್ ಮತ್ತು ಅಸೆಸ್ ಮೆಂಟ್ ರೆಜಿಸ್ಟರ ನ ಪ್ರತಿಯನ್ನು ತನಿಖಾಧಿಕಾರಿಗಳು ನನ್ನೊಂದಿಗೆ ಕೇಳಿರುವುದಿಲ್ಲ ಎಂದರೆ ಸರಿ. ಮಿರ್ಲೆ ಗ್ರಾಮದಲ್ಲಿ ಸಿದ್ದೇಗೌಡ ಎನ್ನುವ ಹೆಸರಿನ ಹಲವಾರು ವ್ಯಕ್ತಿಗಳು ಇರುತ್ತಾರೆ ಎಂದರೆ ಸರಿ. ನಿಪಿ.5 ಮತ್ತು 6 ರ ದಾಖಲೆಗಳನ್ನು ನಾನು ಪೋಲಿಸರಿಗೆ ನೀಡುವ ಪೂರ್ವದಲ್ಲಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ. ಆದರೆ ಸ್ಥಳ ಪರಿಶೀಲನೆ ಮಾಡಲು ಹೋದ ದಿನಾಂಕ ನನಗೆ ನೆನಪಿಲ್ಲ. ಸ್ಥಳ ಪರಿಶೀಲನೆ ಮಾಡಲು ನಾನು ಮದ್ಯಾಹ್ನ 1.30 ಕ್ಕೆ ಹೋಗಿರುತ್ತೇನೆ. ಸ್ಥಳ ಪರಿಶೀಲನೆ ಮಾಡುವ ಪೂರ್ವದಲ್ಲಿ ನಾನು ಸಂಬಂದಪಟ್ಟವರಿಗೆ ನೋಟಿಸನ್ನು ನೀಡಿರುವುದಿಲ್ಲ.

2. ಸ್ಥಳ ಪರಿಶೀಲನೆ ಮಾಡಲು ನಾನು ಮತ್ತು ಬಿಲ್ ಕಲೆಕ್ಟರ್ ಜೊತೆಯಾಗಿ ಹೋಗಿದ್ದೇವು. ಸ್ಥಳ ಪರಿಶೀಲನೆ ಮಾಡಿ ನಾನು ಮಹಜರ್ ಮಾಡಿರುತ್ತೇನೆ. ಸದರಿ ಸ್ಥಳ ಮಹಜರ್ ಗೆ ನಾನು ಅಕ್ಕಪಕ್ಕದ ಮನೆಯವರ ಸಹಿಗಳನ್ನು ಪಡೆದಿರುತ್ತೇನೆ. ನಾನು ಮಾಡಿದ ಸ್ಥಳ ಮಹಜರ್ ನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ. ನಾನು ನೀಡಿದ ನಿಪಿ.5 ಮತ್ತು 6 ರ ದಾಖಲೆಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ಬೇರೆಯವರಿಗೆ ಸಂಬಂದಪಟ್ಟ ದಾಖಲಾತಿಗಳನ್ನು ನೀಡಿ ಪೋಲಿಸರಿಗೆ ಸಹಾಯ ಮಾಡಲು ನಾನು ಸುಳ್ಳು ದಾಖಲೆಯನ್ನು ಸೃಷ್ಠಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ** ಃ ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ.